ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 02-02-1976--ಪಾರ್ಟ್-1

# *ತಂದೆಯ ಸ್ನೇಹಿಯಾಗುವ ಚಿಹ್ನೆಯಾಗಿದೆ- ಫರಿಶ್ತಾ ಸ್ವರೂಪರಾಗುವುದು.*

(बाप-स्नेही बनने की निशानी- फरिश्ता-स्वरूप बनना)

ಸದಾ ತಮ್ಮ ಭವಿಷ್ಯವು ತಮ್ಮಮುಂದೆ ಇರುತ್ತದೆಯೇ? ನಿಮಿತ್ತರಾಗಿರುವ ಆತ್ಮರು ತಮ್ಮ ಭವಿಷ್ಯವನ್ನು ಎಷ್ಟು ಎದುರಿಗಿಟ್ಟುಕೊಂಡಿರುತ್ತಾರೆಯೋ ಅಷ್ಟೇ ಅನ್ಯರಿಗೂ ಸಹ ತಮ್ಮ ಭವಿಷ್ಯದ ಪ್ರೇರಣೆಯನ್ನು ಕೊಡಲು ಸಾಧ್ಯ. ತಮ್ಮ ಭವಿಷ್ಯವು ಸ್ಪಷ್ಟವಾಗಿಲ್ಲವೆಂದರೆ ಅನ್ಯರಿಗೂ ಸ್ಪಷ್ಟಪಡಿಸುವಂತಹ ಮಾರ್ಗವನ್ನು ತಿಳಿಸಲು ಸಾಧ್ಯವಿಲ್ಲ. ತಮ್ಮ ಭವಿಷ್ಯವು ಸ್ಪಷ್ಟವಿದೆಯೇ? ಮಹಾರಾಜಾ ಅಥವಾ ಮಹಾರಾಣಿ, ಏನೇ ಆಗಬಹುದು ಆದರೆ ಅದಕ್ಕಿಂತಲೂ ಮೊದಲು ತಮ್ಮ ಭವಿಷ್ಯದ ಫರಿಸ್ತಾಸ್ಥಿತಿಯ, ಕರ್ಮಾತೀತ ಸ್ಥಿತಿಯು ತಮ್ಮಮುಂದೆ ಸ್ಪಷ್ಟವಾಗಿ ಬರುತ್ತದೆಯೇ? ಇಂತಹ ಅನುಭವವಾಗುತ್ತದೆಯೇ- ನಾನು ಪ್ರತೀ ಕಲ್ಪದಲ್ಲಿಯೂ ಫರಿಶ್ತಾ ಸ್ವರೂಪದಲ್ಲಿ ಈ ಪಾತ್ರವನ್ನು ಅಭಿನಯಿಸಿದ್ದೆನು ಮತ್ತು ಈಗ ಅಭಿನಯಿಸಬೇಕಾಗಿದೆ. ಅದರ ಹೊಳಪು ತಮ್ಮಮುಂದೆ ಬರುತ್ತದೆಯೇ ಹೇಗೆ ದರ್ಪಣದಲ್ಲಿ ತಮ್ಮ ಸ್ವರೂಪದ ಹೊಳಪನ್ನು ನೋಡುತ್ತೀರೋ ಹಾಗೆಯೇ ಜ್ಞಾನದ ದರ್ಪಣದಲ್ಲಿ ತಮ್ಮ ಪುರುಷಾರ್ಥದಿಂದ ಫರಿಶ್ತೆಯ ಹೊಳಪು ಸ್ಪಷ್ಟವಾಗಿ ಕಂಡುಬರುತ್ತದೆಯೇ? ಎಲ್ಲಿಯವರೆಗೆ ಫರಿಶ್ತೆಯ ಹೊಳಪು ಸ್ಪಷ್ಟವಾಗಿ ಕಂಡುಬರುವುದಿಲ್ಲವೋ ಅಲ್ಲಿಯವರೆಗೆ ಭವಿಷ್ಯವೂ ಸಹ ಸ್ಪಷ್ಟವಾಗುವುದಿಲ್ಲ. ಈ ಸಂಕಲ್ಪವೇ ಬರುತ್ತಿರುತ್ತದೆ. ಬಹುಷಃ ನಾನು ಈ ರೀತಿ ಆಗಬೇಕಾ ಅಥವಾ ಆ ರೀತಿ ಆಗಬೇಕಾ? ಆದರೆ ಫರಿಶ್ತೆಯ ಹೊಳಪು ಸ್ಪಷ್ಟವಾಗಿ ಕಂಡುಬರುತ್ತಿದೆಯೆಂದರೆ ಅದೂ ಸಹ ಸ್ಪಷ್ಟವಾಗಿ ಕಂಡುಬರುತ್ತದೆ. ಅಂದಮೇಲೆ ಅದು ಕಾಣಿಸುತ್ತಿದೆಯೇ ಅಥವಾ ಈಗಲೂ ಪರದೆಯ ಒಳಗಿದ್ದೀರಾ? ಹೇಗೆ ಚಿತ್ರದ ಉದ್ಘಾಟನೆ ಮಾಡುತ್ತಾರೆಂದರೆ ತಮ್ಮ ಫರಿಸ್ತಾ ಸ್ವರೂಪದ ಉದ್ಘಾಟನೆಯನ್ನು ಯಾವಾಗ ಮಾಡುತ್ತೀರಿ? ತಾವೇ ಮಾಡುತ್ತೀರಾ ಅಥವಾ ಚೀಫ್ ಗೆಸ್ಟ್ ನ್ನು (ಮುಖ್ಯ ಅತಿಥಿ) ಕರೆಸುತ್ತೀರಾ? ಈ ಪುರುಷಾರ್ಥದ ಬಲಹೀನತೆಯ ಪರದೆಯನ್ನು ಪಕ್ಕಕ್ಕೆ ಸರಿಸುತ್ತೀರೆಂದರೆ ಸ್ಪಷ್ಟವಾದ ಫರಿಶ್ತಾ ರೂಪವಾಗಿ ಬಿಡುತ್ತದೆ.

ಈಗಂತೂ ನಡೆಯುತ್ತಾ-ತಿರುಗಾಡು ಇಂತಹ ಅನುಭವ ಆಗಬೇಕಾಗಿದೆ. ಹೇಗೆ ಸಾಕಾರನನ್ನು (ಬ್ರಹ್ಮಾ) ನೋಡಿದಿರಿ, ನಡೆಯುತ್ತಾ- ತಿರುಗಾಡುತ್ತಾ ಫರಿಶ್ತಾರೂಪದಲ್ಲಿ ಅಥವಾ ಭವಿಷ್ಯದ ರೂಪದ ಅನುಭವವಾಗುತ್ತಿತ್ತು. ಆ ಸಮಯದಲ್ಲಂತೂ ಅನ್ಯರಿಗೂ ಅನುಭವವಾಗುತ್ತಿತ್ತು. ನಾನು ಶಿಕ್ಷಕನಾಗಿದ್ದೇನೆ, ನಾನು ಸೇವಾಧಾರಿಯಾಗಿದ್ದೇನೆ, ಎಂತಹ ಸಮಯವೋ ಅಂತಹ ಸ್ವರೂಪವಾಗಿಬಿಡುತ್ತದೆ. ಈಗ ಸ್ವಯಂನ್ನು ಫರಿಶ್ತಾರೂಪದಲ್ಲಿ ಅನುಭವ ಮಾಡಿರಿ ಆಗ ಸಾಕ್ಷಾತ್ಕಾರವಾಗುತ್ತದೆ. ಸಾಕ್ಷಾತ್ಕಾರದ ರೂಪವು ಯಾವುದಾಗಿದೆ? ಫರಿಶ್ತಾರೂಪ. ನಡೆಯುತ್ತಾ-ತಿರುಗಾಡುತ್ತಾ ಫರಿಶ್ತಾ ಸ್ವರೂಪವಾಗಬೇಕು. ಒಂದುವೇಳೆ ಸಾಕ್ಷಾತ್ ಫರಿಶ್ತೆಯಾಗಲಿಲ್ಲವೆಂದರೆ ಸಾಕ್ಷಾತ್ಕಾರವನ್ನು ಹೇಗೆ ಮಾಡಿಸಲು ಸಾಧ್ಯವಾಗುತ್ತದೆ? ಅಂದಮೇಲೆ ಶಿಕ್ಷಕಿಯರಿಗಾಗಿ ಈಗ ವಿಶೇಷ ಯಾವ ಪುರುಷಾರ್ಥವಿದೆ? ಇದೇ ಇದೆ- **ನಾನು ಫರಿಶ್ತಾ, ಈ ಸಾಕಾರ ಸೃಷ್ಟಿಯಲ್ಲಿ ಸೇವಾರ್ಥವಾಗಿ ಬಂದಿದ್ದೇನೆ.** ಫರಿಶ್ತೆಯು ಪ್ರಕಟವಾಗುತ್ತದೆ ನಂತರ ಸಮಾವೇಶವಾಗಿಬಿಡುತ್ತದೆ. ಫರಿಶ್ತೆಯು ಸದಾ ಈ ಸಾಕಾರಿ ಸೃಷ್ಟಿಯಲ್ಲಿ ನಿಂತುಕೊಂಡಿರುವುದಿಲ್ಲ. ಕರ್ಮ ಮಾಡುವುದು ಮತ್ತು ಮಾಯವಾಗುವುದು. ಅಂದಮೇಲೆ ಯಾವಾಗ ಇಂತಹ ಫರಿಶ್ತೆಗಳಾಗುತ್ತೀರೆಂದರೆ ಈ ದೇಹ ಮತ್ತು ದೇಹದ ಸಂಬಂಧ ಹಾಗೂ ಹಳೆಯ ಪ್ರಪಂಚದಲ್ಲಿ ಕಾಲುಗಳು ನಿಲ್ಲುವುದಿಲ್ಲ. ನಾವು ತಂದೆಯ ಸ್ನೇಹಿಯಾಗಿದ್ದೇವೆ ಎಂದು ಹೇಳುತ್ತಿದ್ದೀರಿ. ಆದರೆ ತಂದೆಯು ಸೂಕ್ಷ್ಮವತನವಾಸಿ ಮತ್ತು ತಾವು ಇಡೀ ದಿನದಲ್ಲಿ ಸ್ಥೂಲವತನ ವಾಸಿಗಳಾಗಿದ್ದೀರಿ ಅಂದಮೇಲೆ ಹೇಗೆ ಸ್ನೇಹಿಯಾದ್ದೀರಿ!

ಅದೇರೀತಿ ಸೂಕ್ಷ್ಮ ವತನವಾಸಿ ಆಗಬೇಕಾಗಿದೆ. ಸರ್ವಆಕರ್ಷಣೆಗಳು ಹಾಗೂ ಸೆಳೆತಗಳ ಬಂಧನ ಮತ್ತು ಅದರ ಮಾರ್ಗವನ್ನು ಬಂದ್ ಮಾಡಿದಾಗ ತಾವು ಸ್ನೇಹಿಯಾಗಿದ್ದೀರಿ ಎಂದು ಹೇಳಲಾಗುತ್ತದೆ. ಇಲ್ಲಿ ಇರುತ್ತಿದ್ದರೂ ಇಲ್ಲದಂತಿರಬೇಕು. ಇದು ಅಂತಿಮಸ್ಥಿತಿಯಾಗಿದೆ. ವಿಶೇಷವಾಗಿ ಸೇವಾರ್ಥವಾಗಿ ನಿಮಿತ್ತವಾಗಿದ್ದೀರಿ ಅಂದಮೇಲೆ ಅನ್ಯರೂ ಸಹ ಪ್ರೇರಣೆಯನ್ನು ತೆಗೆದು ಕೊಳ್ಳಬಹುದು. ಒಂದುವೇಳೆ ಸಾಕಾರಸೃಷ್ಟಿಯ ಸ್ಮೃತಿಯಿಂದ ದೂರ ವಾಗುತ್ತೀರೆಂದರೆ ಚಿಕ್ಕಪುಟ್ಟ ಯಾವುದೆಲ್ಲಾ ಮಾತುಗಳಲ್ಲಿ ಸಮಯವನ್ನು ವ್ಯರ್ಥ ಮಾಡುತ್ತೀರೋ ಅದು ಆಗುವುದಿಲ್ಲ. ಆದ್ದರಿಂದ ಈಗ ಹೈಜಂಪ್ ಮಾಡಿರಿ. ಸಾಕಾರ ಸೃಷ್ಟಿಯಿಂದ ಸಂಪೂರ್ಣವಾಗಿ ಫರಿಶ್ತೆಗಳ ಪ್ರಪಂಚದಲ್ಲಿ ಹಾಗೂ ಪರಿಶ್ತಾ ಸ್ವರೂಪದಲ್ಲಿರುವುದಕ್ಕೆ ಹೈಜಂಪ್ ಮಾಡುವುದು ಎಂದು ಹೇಳಲಾಗುತ್ತದೆ. ಚಿಕ್ಕಪುಟ್ಟ ಮಾತುಗಳು ಶೋಭಿಸುವುದಿಲ್ಲ. ಇದು ಬಾಬಾರವರ ವಿಶೇಷವಾದ ಉಡುಗೊರೆಯಾಗಿದೆ. ಉಡುಗೊರೆಯನ್ನು ತೆಗೆದುಕೊಳ್ಳುವುದು ಅರ್ಥಾತ್ ಫರಿಶ್ತಾ ಸ್ವರೂಪರಾಗುವುದು. ತಂದೆಯೂ ಸಹ ಈ ಫರಿಶ್ತಾಸ್ವರೂಪದ ಚಿತ್ರವನ್ನು ಉಡುಗೊರೆಯಲ್ಲಿ ಕೊಡುತ್ತಾರೆ. ಈ ಉಡುಗೊರೆಯಿಂದ ಹಳೆಯ ಮಾತುಗಳೆಲ್ಲವೂ ಸಮಾಪ್ತಿಯಾಗಿ ಬಿಡುತ್ತದೆ. ಏಕೆ ಮತ್ತು ಏನು ಎನ್ನುವ ಶಬ್ದವನ್ನು ಉಪಯೋಗಿಸಬಾರದು. ನಿರ್ಣಯ ಶಕ್ತಿ, ಪರಿಶೀಲನೆಯ ಶಕ್ತಿ, ಪರಿವರ್ತನೆಯ ಶಕ್ತಿ- ಯಾವಾಗ ಈ ಮೂರೂ ಶಕ್ತಿಗಳಿರುತ್ತವೆ ಆಗಲೇ ಒಬ್ಬರು ಇನ್ನೊಬ್ಬರಿಗೆ ಖುಷಿಯ ಸಮಾಚಾರವನ್ನು ತಿಳಿಸುತ್ತೀರಿ. ಒಂದುವೇಳೆ ಸ್ವಯಂನಲ್ಲಿ ಪರಿವರ್ತನೆ ಯಾಗುವುದಿಲ್ಲವೆಂದರೆ ಅನ್ಯರಲ್ಲಿಯೂ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ.

**ಪರಿವರ್ತನೆ ಶಕ್ತಿ ಇರುವವರೇ ಸಫಲರಾಗುವುದು.**

ಪ್ರಶ್ನೆ:- ಯಾವುದೇ ಯೋಜನೆಯನ್ನು ಪ್ರತ್ಯಕ್ಷದಲ್ಲಿ ತರುವುದಕ್ಕಾಗಿ ವಿಶೇಷವಾಗಿ ಯಾವ ಶಕ್ತಿಯ ಅವಶ್ಯಕತೆಯಿದೆ?

ಉತ್ತರ:- ಪರಿವರ್ತನೆ ಮಾಡುವ ಶಕ್ತಿ. ಎಲ್ಲಿಯವರೆಗೆ ಪರಿವರ್ತನೆ ಮಾಡುವ ಶಕ್ತಿಯಿರುವುದಿಲ್ಲವೋ ಅಲ್ಲಿಯವರೆಗೆ ನಿರ್ಣಯವನ್ನು ಪ್ರತ್ಯಕ್ಷದಲ್ಲಿ ತರಲು ಸಾಧ್ಯವಿಲ್ಲ ಏಕೆಂದರೆ ಪ್ರತಿಯೊಂದು ಸ್ಥಾನದಲ್ಲಿ, ಪ್ರತೀ ಪರಿಸ್ಥಿತಿಯಲ್ಲಿ, ಭಲೆ ಸ್ವಯಂನ ಪ್ರತಿಯಿರಬಹುದು ಅಥವಾ ಸೇವೆಯಪ್ರತಿ ಇರಬಹುದು, ಅವಶ್ಯವಾಗಿ ಪರಿವರ್ತನೆ ಮಾಡಬೇಕಾಗುತ್ತದೆ. ಹೇಗೆ ಸಫಲತಾ ಮೂರ್ತಿಗಳಾಗಲು ಸಂಸ್ಕಾರ ಹಾಗೂ ಸ್ವಭಾವವನ್ನು ಪರಿವರ್ತನೆ ಮಾಡಬೇಕಾಗುತ್ತದೆಯೋ ಹಾಗೆಯೇ ಸೇವೆಯಲ್ಲಿಯೂ ತಮ್ಮ ವಿಚಾರಗಳನ್ನು ಒಂದಲ್ಲ ಒಂದುಕಡೆ ಪರಿವರ್ತನೆ ಮಾಡಬೇಕಾಗುತ್ತದೆ. ಪರಿವರ್ತನೆ ಮಾಡುವ ಶಕ್ತಿಯಿರುವವರು ಎಂತಹ ಪರಿಸ್ಥಿತಿಯಲ್ಲಾದರೂ ಸಫಲರಾಗಿಬಿಡುತ್ತಾರೆ. ಏಕೆಂದರೆ ಅವರು ಬಹುರೂಪಿಯಾಗಿರುತ್ತಾರೆ. ಯೋಜನೆಗಳನ್ನು ಸೇವೆಯಲ್ಲಿ ತರುತ್ತಾರೆ ಮತ್ತು ಜ್ಞಾನಬಿಂದುಗಳನ್ನು ಪ್ರತ್ಯಕ್ಷ ಜೀವನದಲ್ಲಿ ತರುತ್ತಾರೆ. ಇವೆರಡಕ್ಕಾಗಿ ಪರಿವರ್ತನೆ ಮಾಡುವ ಶಕ್ತಿಯು ಇರಬೇಕಾಗುತ್ತದೆ. ಜ್ಞಾನಪೂರ್ಣರಾಗಿರುವ ಲೆಕ್ಕದಿಂದ ಇದನ್ನಂತು ನಿರ್ಣಯ ಮಾಡುತ್ತಾರೆ ಈ ರೀತಿ ಆಗಬೇಕು ಎನ್ನುತ್ತಾರೆ ಆದರೆ ಪರಿವರ್ತನೆಯಾಗುವುದಿಲ್ಲ. ಇದರ ಕಾರಣವಾಗಿದೆ - ಪರಿವರ್ತನಾ ಶಕ್ತಿಯ ಕೊರತೆ, ಯಾರಲ್ಲಿ ಪರಿವರ್ತನಾ ಶಕ್ತಿಯಿದೆ, ಅವರು ಸರ್ವರ ಸ್ನೇಹಿಗಳಾಗಿರುತ್ತಾರೆ ಮತ್ತು ಸದಾ ಸಫಲರೂ ಆಗಿರುತ್ತಾರೆ. ಸಂಕಲ್ಪದಲ್ಲಿ ಧೃಡತೆಯನ್ನು ತರುವುದರಿಂದ ಪ್ರತ್ಯಕ್ಷಫಲವು ಹೊರಬರುತ್ತದೆ. ಪರಿವರ್ತನೆ ಮಾಡಿ ಸಫಲರಾಗಲೇಬೇಕು ಇದು ಧೃಡಸಂಕಲ್ಪವಾಗಿದೆ. ಸಫಲತಾಮೂರ್ತಿಯರು ಬರುತ್ತೀರೆಂದರೆ ನಾನು ಅವರ ಕೊರಳಿನ ಮಾಲೆಯಾಗುವೆನು ಎಂದು ಸಫಲತೆಯು ಸಫಲತಾ ಮೂರ್ತಿಗಳ ಆಹ್ವಾನ ಮಾಡುತ್ತಿದೆ. ಒಳ್ಳೆಯದು ಓಂಶಾಂತಿ.

ಅವ್ಯಕ್ತ ಮುರಳಿ 02-02-1976.

***ತಂದೆಗೆ ಸ್ನೇಹಿಯಾಗುವ ಚಿಹ್ನೆಯಾಗಿದೆ ಪರಿಶ್ತಾ ಸ್ವರೂಪರಾಗುವುದು.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಭವಿಷ್ಯವನ್ನು ಸ್ಪಷ್ಟವಾಗಿ ಎದುರಿಗಿಟ್ಟುಕೊಂಡು, ಇತರರಿಗೂ ಭವಿಷ್ಯವನ್ನು ಸ್ಪಷ್ಟವಾಗಿ ತಯಾರಿಸಿಕೊಳ್ಳುವ ಮಾರ್ಗವನ್ನು ತೋರಿಸಿದ್ದೇನೆ .

2. ನಾನು ಜ್ಞಾನವೆಂಬ ದರ್ಪಣದಲ್ಲಿ ನನ್ನ ಪುರುಷಾರ್ಥದಿಂದ ಫರಿಶ್ತಾ ಸ್ಥಿತಿಯ ಹೊಳಪು ಮತ್ತು ಭವಿಷ್ಯವನ್ನು ಸ್ಪಷ್ಟವಾಗಿ ನೋಡಿಕೊಂಡಿದ್ದೇನೆ.

3. ನಾನು ನಡೆದಾಡುತ್ತಾ ತಿರುಗಾಡುತ್ತಾ ಫರಿಶ್ತಾ ಸ್ವರೂಪ, ಭವಿಷ್ಯ ಸ್ವರೂಪವನ್ನು ಅನುಭವ ಮಾಡಿಕೊಂಡು ಇತರರಿಗೂ ಅನುಭವ ಮಾಡಿಸಿದ್ದೇನೆ.

4. ನಾನು ಈಶ್ವರೀಯ ಸೇವಾರ್ಥವಾಗಿ ಈ ಭೂಮಿಯ ಮೇಲೆ ಅವತರಿಸಿರುವ ಅವ್ಯಕ್ತ ಫರಿಶ್ತಾ.

5. ನಾನು ಸರ್ವ ಆಕರ್ಷಣೆಗಳು, ಸೆಳೆತದ ಬಂಧನಗಳ ಮಾರ್ಗವನ್ನು ಬಂದ್ ಮಾಡಿ ದಿನವಿಡೀ ಸೂಕ್ಷ್ಮವತನವಾಸಿ ಫರಿಶ್ತಾ ಆಗಿರುತ್ತಾ ತಂದೆಗೆ ಸ್ನೇಹಿ ಆಗಿರುವ ಅಂತಿಮ ಸ್ಥಿತಿ ಸ್ವರೂಪ.

6. ನಾನು ನಿರ್ಣಯ ಶಕ್ತಿ, ಪರಿಶೀಲನೆ ಶಕ್ತಿ, ಪರಿವರ್ತನಾ ಶಕ್ತಿ ಈ ಮೂರು ಶಕ್ತಿಗಳನ್ನು ಧಾರಣೆ ಮಾಡಿ ತಂದೆಯಿಂದ ಉಡುಗೊರೆಯನ್ನು ಪಡೆದ ಫರಿಶ್ತಾ ಸ್ವರೂಪ.

7. ನಾನು ಯೋಜನೆಯನ್ನು ಸೇವೆಯಲ್ಲಿ ತಂದಿರುವ ಪರಿವರ್ತನಾ ಸ್ವರೂಪ.

8. ನಾನು ಪರಿವರ್ತನಾ ಶಕ್ತಿಯನ್ನು ಧಾರಣೆ ಮಾಡಿ ಎಲ್ಲರಿಗೂ ಸ್ನೇಹಿ ಮತ್ತು ಸಫಲತಾ ಮೂರ್ತಿಯಾಗಿ ಇದ್ದೇನೆ.

9. ನಾನು ಪರಿವರ್ತನೆ ಮಾಡಿಕೊಂಡು ಸಫಲವಾಗಲೇಬೇಕು ಎಂಬ ದೃಢಸಂಕಲ್ಪದಿಂದ ಪ್ರತ್ಯಕ್ಷ ಫಲವನ್ನು ಪಡೆದಿರುವ ಸಫಲತಾ ಮೂರ್ತಿ.